**ದಿನಾಂಕ: 19–01–2021ರಂದು ಮಂಗಳವಾರ ಬೆಳಗ್ಗೆ 10:00 ಘಂಟೆಗೆ ವಾರ್ಡ್ ಸಂಖ್ಯೆ:81 ವಿಜ್ಞಾನನಗರ ವಾರ್ಡಿನ M.E.G ಬಡವಣೆಯಲ್ಲಿರುವ ವಿವಿದೊದ್ದೇಶ ಕಟ್ಟಡದ ಸಭಾಂಗಣದಲ್ಲಿ ಶ್ರೀ.ಹನುಮಂತನಾಯ್ಕ ಟಿ,ತೋಟಗಾರಿಕೆ ಅಧಿಕ್ಷಕರು (Nodel Officer) ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

**ಹಾಜರಿದ್ದ ಅಧಿಕಾರಿಗಳು :**

| | |
|---|---|
| 1. | ಶ್ರೀ. ಸುರೇಶ್. ಎಲ್, ಕಿರಿಯ ಅಭಿಯಂತರರು, ವಾರ್ಡ್ ನಂ.81 ಹಾಗೂ ಸದಸ್ಯ ಕಾರ್ಯದರ್ಶಿ |
| 2. | ಶ್ರೀ. ಮೊಹಮ್ಮದ್ದ ಮುದಾಸೀರ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 3. | ಶ್ರೀಮತಿ.ಅಮೃತ ನಾಯ್ಕ್ ಕಂದಾಯ ನಿರಿಕ್ಷಕರು |
| 4. | ಶ್ರೀಮತಿ.ಸುವರ್ಣ ಕಿರಿಯ ಆರೋಗ್ಯ ಪರಿವಿಕ್ಷಕರು |
| 5. | ನಿವಾಸಿ ಕ್ಷೇಮಾಭಿವೃದ್ಧಿ ಸಂಘ/ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ನಿವಾಸಿಗಳು ಹಾಗೂ ಸಾರ್ವಜನಿಕರು |

ಮಾನ್ಯ ಅಧ್ಯಕ್ಷರು ಹಾಜರಿದ್ದ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ರೆಸಿಡೆಂಟ್ಸ್ ವೆಲ್ಪೇರ್ ಆಸೋಸಿಯೆಷನ್‌ನ ಅಧ್ಯಕ್ಷರುಗಳು, ಪ್ರತಿನಿದಿಗಳು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಈ ಹಿಂದೆ ನಡೆದ ಸಭೆಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡಲಾಯಿತು.

ಶ್ರೀ.ವಿಶ್ವನಾಥ ಹೆರಳೆ ಮೊ: 9902918559 ರವರು ಮಾತನಾಡಿ ವಿಜ್ಞಾನ ನಗರದ ವಾರ್ಡ್ ಸಮಿತಿ ಸಭೆಗಳನ್ನು ಮಾನ್ಯ ಆಯುಕ್ತರು ಸುತ್ತೊಲೆಯಲ್ಲಿ ಸೂಚಿಸಿರುವಂತೆ ಪ್ರತಿ ಮಾಹೆಯ 1ನೇ ಮತ್ತು 3ನೇ ಶನಿವಾರ ನಡೆಸಬೇಕಿದ್ದು ಹಲವು ಬಾರಿ ಈ ದಿನಗಳನ್ನು ಹೊರತು ಪಡಿಸಿ ಬೇರೆ ದಿನಗಳಲ್ಲಿ ಮಾಡುತ್ತಿರುವುದನ್ನು ಸಭೆಯ ಗಮನಕ್ಕೆ ತಂದರು. ಇದಕ್ಕೆ ಮಾನ್ಯ ಅಧ್ಯಕ್ಷರು ಪಾಲಿಕೆಯ 198 ವಾರ್ಡ್‌ಗಳಲ್ಲಿ ಇದೇ ದಿನದಂದು ಸಭೆಗಳನ್ನು ನಡೆಸುತ್ತಿದ್ದು ವಿವಿಧ ವಿಭಾಗಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಈ ಸಭೆಗೆ ಹಾಜರಾಗಲು ಕಷ್ಟ ಸಾಧ್ಯವಿರುವುದಾಗಿ ಆದಾಗ್ಯು ಪ್ರತಿ ತಿಂಗಳ 1ನೇ ಅಥವಾ 3ನೇ ಶನಿವಾರದ ಒಂದು ದಿನ ಕಡ್ಡಾಯವಾಗಿ ಸಭೆಯನ್ನು ನಿಗಧಿಪಡಿಸುವುದಾಗಿ ತಿಳಿಸಿದರು.

ವಿಜ್ಞಾನ ನಗರದ ಜೈನ್ ಹೈಟ್ಸ್ ಕಟ್ಟಡದ ಮುಖ್ಯ ರಸ್ತೆಯಲ್ಲಿ ಹಲವು ವರ್ಷಗಳಿಂದ ದುರಸ್ಥಿಯಾದ ವಾಹನಗಳನ್ನು ನಿಲ್ಲಿಸಿದ್ದು ಸಾರ್ವಜನಿಕ ಓಡಾಟಕ್ಕೆ ತೊಂದರೆಯಾಗುತ್ತಿದ್ದು ಈ ವಾಹನಗಳನ್ನು ತೆರವುಗೊಳಿಸಲು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಕೋರಿದರು.

ಕ್ರಮ: ವಾರ್ಡ್ ಅಭಿಯಂತರರು

ಬ್ರಿಗೆಡಿಯರ್ ಕಡಪಟ್ಟಿ ಮೊ: 9901850851 ರವರು ಮಾತನಾಡಿ ಬಡಾವಣೆಯಲ್ಲಿ ಜಿಯೋ,ಏರಟೆಲ್ ಮತ್ತು ಕೆ.ಪಿ.ಟಿ.ಸಿ.ಎಲ್ ಸಂಸ್ಥೆಗಳು ಬೂಗತ ಕೇಬಲ್‌ಗಳನ್ನು ಅಳವಡಿಸುತ್ತಿದ್ದು ಸದರಿ ಸಂಸ್ಥೆಗಳು ಸ್ಥಾಪಿಸುತ್ತಿರುವ ಚೆಂಬರಗಳು ಎಸ.ಓ.ಪಿ ಪ್ರಕಾರ ನಿರ್ವಹಿಸದೆ ಬಾರಿ ವಾಹನಗಳು ಸಂಚಾರಿಸುವಾಗ ಈ ಚೆಂಬರಗಳು ಕುಸಿಯುತ್ತಿದ್ದು ಈ ಬಗ್ಗೆ ವಿವರವಾದ ಚೆಂಬರ್‌ಗಳ ಅಳವಡಿಕೆಯ (Specification)ನಿರ್ದಿಷ್ಟ ವಿವರಣೆ ವರದಿಯನ್ನು ಪಡೆದು ಪರಿಶೀಲಿಸುವಂತೆ ಕೋರಿದರು.



Scanned with CamScanner

ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಕಾಟ (Stray Dogs) ವಿಪರಿತವಾಗಿದ್ದು ಸಾರ್ವಜನಿಕರು ಭಯ ಬೀತರಾಗಿದ್ದು ಇದನ್ನು ನಿಯಂತ್ರಣಕ್ಕೆ ತರಲು ತಕ್ಕ ಕ್ರಮ ಜರೂರಾಗಿ ಜರುಗಿಸಲು ವಿನಂತಿಸಿದರು. ಇದಕ್ಕೆ ವಾರ್ಡ್ ಅಭಿಯಂತರರು ಮಾತನಾಡಿ ಬೀದಿ ನಾಯಿಗಳನ್ನು ಯಾವುದೇ ಕಾರಣಕ್ಕೂ ಸೆರೆಹಿಡಿಯುವಂತಿಲ್ಲ ಆದರೆ ಸದರಿ ನಾಯಿಗಳ ಸಂತಾನೋತ್ಪತ್ತಿಯನ್ನು ನಿಯಂತ್ರಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶುವೈದ್ಯೆ ಶಾಖೆಯಿಂದ ಕ್ರಮವಹಿಸುವುದಾಗಿ ತಿಳಿಸಿದರು.

ಕ್ರಮ: ಪಶುವೈದ್ಯೆ ಅಧಿಕಾರಿಗಳು
ಮಹದೇವಪುರ ವಲಯ

ಪಿ.ಡಬ್ಲ್ಯೂ.ಡಿ ಮುಖ್ಯ ರಸ್ತೆಯಲ್ಲಿ ಬೀದಿ ಬದಿ ವ್ಯಾಪಾರಿಗಳಿಂದ ಪಾದಚಾರಿ ಮಾರ್ಗವು ಅತಿಕ್ರಮಿಸಿದ್ದು ಕೂಡಲೇ ಪಾದಚಾರಿ ಮಾರ್ಗವನ್ನು ಇವರಿಂದ ಮುಕ್ತಗೊಳಿಸಬೇಕೆಂದು ಕೋರಿದರು. ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿದ್ದು ಸದರಿ ಕಾಮಗಾರಿಗಳ ವಿವರಗಳನ್ನೊಳಗೊಂಡ ಮಾಹಿತಿಯ ಬೋರ್ಡ್‌ಗಳನ್ನು ಅಳವಡಿಸುವಂತೆ ಹಾಗೂ ಸ್ಥಳಿಯ ನಾಗರಿಕರಿಗೆ ಕಾಮಗಾರಿಯ ಪ್ರಾರಂಭದ ಮುನ್ನ ನಿವಾಸಿ ಕ್ಷೇಮಾಭಿವೃದ್ದಿ ಸಂಘ/ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ನಿವಾಸಿಗಳು ಹಾಗೂ ಸಾರ್ವಜನಿಕರಿಗೆ ತಿಳಿಸಲು ಕೋರಿದರು.

ಕ್ರಮ: ವಾರ್ಡ್ ಅಭಿಯಂತರರು

ಎಸ್.ಆರ್.ಆರ್. ಬಡಾವಣೆಯ ನೀರು ಸರಬರಾಜು ಸಂಬಂಧ ವರ್ಷಗಳಿಂದ ಶಾಶ್ವತ ಪರಿಹಾರ ದೊರಕದೆ ಇರುವುದನ್ನು ಜಲ ಮಂಡಳಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದು ಕೂಡಲೇ ಇದಕ್ಕೆ ಒಂದು ಪರಿಹಾರದ ಅಂತ್ಯ ದೊರಕಿಸಿಕೊಡಬೇಕೆಂದು ವಿನಂತಿಸಿದರು.

ಕ್ರಮ: ಸ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ
ಅಧಿಕಾರಿಗಳು

ಶ್ರೀಮತಿ.ಸತ್ಯ ವಾಣಿ ಮೊ.9964454083 ರವರು ಮಾತನಾಡಿ ರಸ್ತೆಗಳಿಗೆ ಕಾಂಕ್ರೀಟ್ ಅಥವಾ ಡಾಂಬರು ಮಾಡುವ ಸಮಯದಲ್ಲಿ ರಸ್ತೆಗಳಲ್ಲಿರುವ ಗಿಡಗಳ ಬುಡವನ್ನು ಬಿಟ್ಟು ಅಳವಡಿಸಬೇಕೆಂದು ಕೋರಿದರು.

ಘನ ತ್ಯಾಜ್ಯ ನಿರ್ವಹಣೆಯ ಭಾಗವಾದ ಹಸಿ ತ್ಯಾಜ್ಯ ಮತ್ತು ಒಣ ತ್ಯಾಜ್ಯ ಬೇರ್ಪಡಿಸಲು ಹೆಚ್.ಎ.ಎಲ್ ಅಥಾವ ಬಿ.ಇ.ಎಮ್.ಎಲ್ ನಿಂದ ಜಾಗವನ್ನು ಪಡೆಯಲು ಕ್ರಮ ವಹಿಸುವಂತೆ ಕೋರಿದರು.

ಕ್ರಮ: ಘನ ತ್ಯಾಜ್ಯ ನಿರ್ವಹಣೆ ಅಧಿಕಾರಿ
ಹಾಗೂ ಹಿರಿಯ ಆರೋಗ್ಯ ನಿರಿಕ್ಷಕರು.

ಶ್ರೀಮತಿ. ಶೋಬ ಹಳಿಮತ್ ಮೊ.7259689229 ರವರು ಮಾತನಾಡಿ ಬಸವನಗರ 1ನೇ ಅಡ್ಡ ರಸ್ತೆಯಲ್ಲಿ ನಿರಂತರವಾಗಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುತ್ತಿದ್ದು ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದ್ದು ಈ ಬಗ್ಗೆ ಕ್ರಮ ವಹಿಸಲು ಕೋರಿದರು ಹಾಗೂ ಈ ಅಡ್ಡ ರಸ್ತೆಗಳಲ್ಲಿ ಬೀದಿ ದೀಪಗಳನ್ನು ಸರಿಪಡಿಸಿಕೊಡುವಂತೆ ಕೋರಿದರು.



Scanned with CamScanner

ಬಸವನಗರ 1ನೇ ಅಡ್ಡ ರಸ್ತೆಯಲ್ಲಿ ಜಲಮಂಡಳಿಯ ಪೈಪ್ ಲೈನ್‌ನಲ್ಲಿ ಸೋರಿಕೆಯಾಗುತ್ತಿದ್ದು ಕೂಡಲೇ ಅಧಿಕಾರಿಗಳು ಸರಿಪಡಿಸುವಂತೆ ಕೋರಿದರು.

ಕ್ರಮ: ಸ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು

ಖಾಲಿ ನಿವೇಶನಗಳಲ್ಲಿ ಕಸ ಹಾಕುತ್ತಿರುವುದನ್ನು ತಡೆಗಟ್ಟಲು ಕ್ರಮ ವಹಿಸಲು ನಿವಾಸಿ ಕ್ಷೇಮಾಭಿವೃದ್ಧಿ ಸಂಘ/ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ನಿವಾಸಿಗಳು ಹಾಗೂ ಸಾರ್ವಜನಿಕರು ಕೋರಿದರು.

ಕ್ರಮ: ಹಿರಿಯ ಆರೋಗ್ಯ ನಿರಿಕ್ಷಕರು.

ಶ್ರೀ.ಶಿವಕುಮಾರ್ ರವರು ಮಾತನಾಡಿ ಅನಧಿಕೃತ ಕಟ್ಟಡಗಳ ನಿರ್ಮಾಣವನ್ನು ನಿಯಂತ್ರಿಸಲು ಸೂಕ್ತ ಕ್ರಮ ಜರುಗಿಸಬೇಕೆಂದು ವಿನಂತಿಸಿದರು.

ಶ್ರೀ.ಶ್ರೀಜಿತ್ ಬೃಂದಾವನ ಬಡಾವಣೆ ರವರು ಮಾತನಾಡಿ 6ನೇ ಎ. ಅಡ್ಡ ರಸ್ತೆ ಮತ್ತು 7ನೇ ಅಡ್ಡ ರಸ್ತೆಯನ್ನು ಡಾಂಬರಿಕರಣ ಮಾಡಿಕೊಡುವಂತೆ ಕೋರಿದರು.

ಕ್ರಮ: ವಾರ್ಡ್ ಅಭಿಯಂತರರು

ಶ್ರೀ.ಫಸಲ್ ರವರು ಮಾತನಾಡಿ ಸದರಿಯವರ ಮನೆಯು ರಸ್ತೆ ಮಟ್ಟದಲ್ಲಿದ್ದು ಪಾಲಿಕೆಯಿಂದ ರಸ್ತೆಗಳನ್ನು ಅಭಿವೃದ್ಧಿ ಪಡಿಸುತ್ತಿದ್ದು ಈಗಿರುವ ರಸ್ತೆಯ ಮಟ್ಟಕ್ಕೆ ಎತ್ತರವನ್ನು ಕಾಪಾಡಿಕೊಳ್ಳಬೇಕೆಂದು ವಿನಂತಿಸಿದರು.

ಕ್ರಮ: ವಾರ್ಡ್ ಅಭಿಯಂತರರು

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಿರಿಯ ಅಭಿಯಂತರರು ಹಾಗೂ ಕಾರ್ಯದರ್ಶಿಗಳು
ವಾರ್ಡ್ ನಂ.81,ವಿಜ್ಞಾನ ನಗರ

ವಾರ್ಡ್ ಸಮಿತಿ ಅಧ್ಯಕ್ಷಕರು ಹಾಗೂ
ನೋಡೆಲ್ ಅಧಿಕಾರಿಗಳು

**ಪ್ರತಿಯನ್ನು:**

1. ಮಾನ್ಯ ಜಂಟಿ ಆಯುಕ್ತರು, ಬಿಬಿಎಂಪಿ, ಮಹದೇವಪುರ ವಲಯ ರವರ ಮಾಹಿತಿಗಾಗಿ ಗೌರವ ಪೂರ್ವಕವಾಗಿ ಸಲ್ಲಿಸಿದೆ.
2. ತೋಟಗಾರಿಕೆ ಅಧೀಕ್ಷಕರು, ಬಿ.ಬಿ.ಎಂ.ಪಿ ಮಹದೇವಪುರ ವಲಯ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎ.ಎಲ್ ಏರ್‌ಪೋರ್ಟ್ ಉಪವಿಭಾಗ.
4. ಕಂದಾಯ ಅಧಿಕಾರಿಗಳು/ಸಹಾಯಕ ಕಂದಾಯ ಅಧಿಕಾರಿಗಳು/ನಿರೀಕ್ಷಕರು, ವಿಜ್ಞಾನ ನಗರ ವಾರ್ಡ್.
5. ಕಲ್ಯಾಣ ಶಾಖೆ ಅಧಿಕಾರಿಗಳು, ಬಿ.ಬಿ.ಎಂ.ಪಿ ಮಹದೇವಪುರ ವಲಯ



Scanned with CamScanner

6. ಎಸ್.ಡಬ್ಲ್ಯೂ.ಎಂ, ಅಧಿಕಾರಿಗಳು/ಗುತ್ತಿಗೆದಾರರು, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ 9ನೇ ಮಹಡಿ, ಬೆಂಗಳೂರು-11.
7. ವಿದ್ಯುತ್ ವಿಭಾಗದ, ಅಧಿಕಾರಿಗಳು/ಗುತ್ತಿಗೆದಾರರು ವಿಜ್ಞಾನ ನಗರ ವಾರ್ಡ್.
8. ಆರೋಗ್ಯ ಅಧಿಕಾರಿಗಳು ವಿಜ್ಞಾನ ನಗರ ವಾರ್ಡ್.
9. ಸಹಾಯಕ ನಿರ್ದೇಶಕರು ಪಶುಪಾಲನೆ ಅಧಿಕಾರಿಗಳು/ಗುತ್ತಿಗೆದಾರರು ವಿಜ್ಞಾನ ನಗರ ವಾರ್ಡ್.
10. ಬಿ.ಡಬ್ಲ್ಯೂ.ಎಸ್.ಎಸ್.ಬಿ, ಅಧಿಕಾರಿಗಳು/ಗುತ್ತಿಗೆದಾರರು ವಿಜ್ಞಾನ ನಗರ ವಾರ್ಡ್.
11. ಟ್ರಾಫೀಕ್/ಸಿವಿಲ್ ಪೋಲಿಸ್, ವಿಜ್ಞಾನ ನಗರ ವಾರ್ಡ್.
12. ರೆಸಿಡೆನ್ಸ್ ವೆಲ್‌ಫೇರ್ ಆಸೋಸಿಯೇಷನ್ಸ, ವಿಜ್ಞಾನ ನಗರ ವಾರ್ಡ್.
13. ವಾರ್ಡ್‌ಗೆ ಸಂಬಂಧಿಸಿದ ಎನ್.ಜಿ.ಓ,ಆರ್.ಡಬ್ಲ್ಯೂ.ಎ ಗಳು ವಿಜ್ಞಾನ ನಗರ ವಾರ್ಡ್.
14. ವಾರ್ಡ್‌ಗೆ ಸಂಬಂಧಿಸಿದ, ಎಸ್.ಸಿ/ಎಸ.ಟಿ ಸಂಘಟನೆಗಳು.
15. ವಾರ್ಡ್‌ನ ಆಸಕ್ತಿಯುಳ್ಳ ವಾಲೆಂಟಿಯರ್ಸ್.

Scanned with CamScanner